ದೊಡ್ಡ ಪಾತ್ರೆಯಲ್ಲಿ ಅದನ್ನು ಬೇಯಿಸಲು ನೀರು ಕುದಿಯುತ್ತ ಇತ್ತು.

ಈ ದೃಶ್ಯವನ್ನು ನೋಡಿ ಜಿಂಕೆಗೆ ತನ್ನ ಮನೆಯೊಳಗೆ ತನಗೆ ಹಗೆಯಾಗಿರುವ ಪ್ರಾಣಿ ಸೇರಿಕೊಂಡಿರುವುದು ಅರಿವಾಯಿತು. ಯಾವ ಕ್ಷಣದಲ್ಲಿ ಚಿರತೆ ತನ್ನನ್ನು ನೋಡಿ ಕೊಲ್ಲುವುದೋ ಎಂಬ ಚಿಂತೆಯಿಂದ ಅದಕ್ಕೆ ಆಹಾರ ಸೇರಲಿಲ್ಲ. ನಿದ್ರೆ ಬಳಿಗೆ ಸುಳಿಯಲಿಲ್ಲ. ಒಂದು ದಿನ ಕಾಡಿನಲ್ಲಿ ಇರುವೆ ತಿನ್ನುವ ಚಿಪ್ಪಿನ ಹಂದಿ ಗೆಳೆಯನಾದ ಜಿಂಕೆಯನ್ನು ನೋಡಿತು. ಶರೀರ ಕೃಶವಾಗಿ ಕಡ್ಡಿಯಾಗಿದ್ದ ಅದನ್ನು ಕಂಡು ಬೇಸರದಿಂದ, 'ಯಾಕಪ್ಪ ಹೀಗಿದ್ದೀಯಾ, ಏನಾಯಿತು?' ಎಂದು ಕೇಳಿತು.

'ನನಗೆ ಸಾಯುತ್ತೇನೆಂಬ ಭೀತಿ ಕಾಡುತ್ತಿದೆ ಕಣೋ. ಚಿರತೆಯೊಂದು ನನ್ನ ಮನೆಯಲ್ಲೇ ವಾಸವಾಗಿದೆ' ಎಂದು ಜಿಂಕೆ ಇರುವ ವಿಷಯ ಹೇಳಿತು.

ಚಿಪ್ಪಿನ ಹಂದಿ ಗೆಳೆಯನಿಗೆ ಸಾಂತ್ವನ ಹೇಳಿತು. 'ಹೆದರಬೇಡ. ಹಗೆಯನ್ನು ಮನೆಯಿಂದ ಹೊರಗೆ ಹಾಕುವ ಉಪಾಯ ನಾನು ಹೇಳುತ್ತೇನೆ. ಆದರೆ ನೀನು ಅದರ ಆಹಾರವೆಂಬ ಗುಟ್ಟು ಅದಕ್ಕೆ ಗೊತ್ತಾಗಬಾರದು. ಕೆಸರು ಮಣ್ಣಿನಲ್ಲಿ ಹೊರಳಾಡಿ ನಿನ್ನ ಗುರುತು ಹತ್ತದಂತೆ ಮಾಡಿಕೋ. ಬಳಿಕ ನಾನು ಹೇಳಿದಂತೆ ಮಾಡು. ನಿನಗೆ ಚಿಂತೆ ದೂರವಾಗುತ್ತದೆ' ಎಂದು ಉಪಾಯ ಹೇಳಿಕೊಟ್ಟಿತು. ಜಿಂಕೆ ಕೆಸರಿನಲ್ಲಿ ಹೊರಳಾಡಿ ರೂಪ ಬದಲಾವಣೆ ಮಾಡಿಕೊಂಡು ಮನೆಗೆ ಮರಳಿತು.

ಮರುದಿನ ಜಿಂಕೆ ನಿದ್ರೆಯಲ್ಲಿದ್ದ ಚಿರತೆಯನ್ನು ಕೂಗಿ ಕರೆಯಿತು. ಚಿರತೆ ಕಣ್ತೆರೆದು ಅಚ್ಚರಿಯಿಂದ, 'ಅರೇ ಯಾರು ನೀನು? ನನ್ನ ಮನೆಯೊಳಗೆ ಯಾಕೆ ಬಂದಿದ್ದೀ?' ಎಂದು ಕೇಳಿತು. 'ಇದು ನಿನ್ನ ಮನೆ ಹೇಗಾಗುತ್ತದೆ? ಮನೆಯ ನೆಲ ಸಮತಟ್ಟು ಮಾಡಿ, ಗೋಡೆ ಕಟ್ಟಿ, ಚಾವಣಿ ಕೆಲಸ ಮುಗಿಸಿದ್ದು ನಾನು' ಎಂದಿತು ಜಿಂಕೆ. ಇದಾವುದೋ ಶಕ್ತಿಶಾಲಿ ಪ್ರಾಣಿಯಿರಬೇಕೆಂದು ಭಾವಿಸಿದ ಚಿರತೆ ಮೆತ್ತಗಾಯಿತು. 'ಇರಲಿ, ಈಗ ನನ್ನಿಂದ ಏನಾಗಬೇಕು ಹೇಳು?' ಎಂದು ಕೇಳಿತು.

'ನನಗೆ ನಿನ್ನ ಕೊಠಡಿಯ ಒಲೆಯ ಮೇಲೆ ಪಾತ್ರೆಯಿರಿಸಿ ನೀರು ಕುದಿಯಲು ಇಡಬೇಕು. ಹಾಗೆಯೇ ಒಂದಿಷ್ಟು ಉಪ್ಪು, ಮೆಣಸು, ಮಸಾಲೆ ಪದಾರ್ಥಗಳು ಬೇಕು' ಎಂದು ಕೇಳಿತು ಜಿಂಕೆ. ಚಿರತೆ ಅಚ್ಚರಿಯಿಂದ, 'ಇದೆಲ್ಲ ನಿನಗೆ ಯಾಕೆ ಬೇಕು?' ಎಂದು ಪ್ರಶ್ನಿಸಿತು.

'ಯಾಕೆ ಅಂದರೆ ನಾನು ಒಂದು ಚಿರತೆಯನ್ನು ಬೇಟೆಯಾಡಿ ತಂದಿದ್ದೇನೆ. ಅದರ ಮಾಂಸವನ್ನು ಹಸಿಯಾಗಿ ತಿನ್ನಲಾಗುತ್ತದೆಯೆ? ಉಪ್ಪು, ಮಸಾಲೆ ಬೆರೆಸಿ ಬೇಯಿಸಬೇಕು. ಅದಕ್ಕಾಗಿ ನಿನ್ನಲ್ಲಿ ಕೇಳುತ್ತಿದ್ದೇನೆ. ಬೆಂದ ಮೇಲೆ ನಿನಗೂ ಸ್ವಲ್ಪ ಕೊಡುತ್ತೇನೆ' ಎಂದು ಜಿಂಕೆ ಹೇಳಿತು.

ಜಿಂಕೆಯ ಮಾತು ಕೇಳಿ ಚಿರತೆಯ ಎದೆ ಢವಢವ ಎಂದಿತು. ಕೆಸರು ಮೆತ್ತಿಕೊಂಡು ಭಯಂಕರವಾಗಿ ಕಾಣುವ ಈ ಜೀವಿ ಯಾವುದೆಂದೇ ತನಗೆ ಗೊತ್ತಿಲ್ಲ. ನೆತ್ತಿಯಲ್ಲಿ ಹರಿತವಾದ ಕೋಡುಗಳೂ ಇವೆ. ಸಾಲದ್ದಕ್ಕೆ ಚಿರತೆಯನ್ನು ಬೇಟೆಯಾಡಿಕೊಂಡು ಬಂದಿದ್ದೇನೆಂದು ಹೇಳಿ ಅಡುಗೆಗೆ ಮಸಾಲೆ ಕೇಳುತ್ತ ಇದೆ. ಇಂದಲ್ಲ , ನಾಳೆ ಹಗಲು ಮೈ ಮರೆತು ನಿದ್ರಿಸಿರುವಾಗ ಇದು ತನ್ನನ್ನೇ ಹಿಡಿದು ಕೊಲ್ಲಬಹುದು ಎಂದು ಮನಸ್ಸಿನಲ್ಲೇ ಲೆಕ್ಕ ಹಾಕಿತು. ಇನ್ನೂ ಈ ಮನೆಯಲ್ಲೇ ಉಳಿದರೆ ಜೀವವಂತೂ ಹೋಗುತ್ತದೆ ಎಂದು ಭಾವಿಸಿ ಅದರ ನಾಲಿಗೆ ಒಣಗಿ ಹೋಯಿತು.

ಚಿರತೆ ಮೆಲ್ಲಗೆ ಎದ್ದು ಮನೆಯಿಂದ ಹೊರಗೆ ಬಂದಿತು. 'ನಿನಗೆ ಬೇಕಾದ ಪಾತ್ರೆ ಅಲ್ಲಿಯೇ ಇದೆ. ಉಪ್ಪು, ಮೆಣಸು, ಮಸಾಲೆ ಎಲ್ಲ ಖಾಲಿಯಾಗಿದೆ. ಅಂಗಡಿಗೆ ಹೋಗಿ ಈಗ ತಂದುಬಿಡುತ್ತೇನೆ' ಎಂದು ಹೇಳಿ ಬದುಕಿದೆಯಾ ಬಡ ಜೀವವೇ ಎನ್ನುತ್ತ ಕಾಲಿಗೆ ಬುದ್ಧಿ ಹೇಳಿತು. ವೇಗವಾಗಿ ನದಿಯನ್ನು ದಾಟಿ ದೂರದ ಕಾಡಿಗೆ ಹೋಗಿ ಸೇರಿಕೊಂಡಿತು. ಚಿಪ್ಪಿನ ಹಂದಿ ಹೇಳಿಕೊಟ್ಟ ಉಪಾಯದಿಂದ ಜಿಂಕೆ ಸುಖವಾಗಿ ತನ್ನ ಮನೆಯಲ್ಲಿ ವಾಸವಾಗಿತ್ತು.

(ಬ್ರೆಜಿಲ್ ದೇಶದ ಕಥೆ)

**– ಪ.ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ**



# ಬಂದರೆ ಬರಲಿ ಗುಡುಗಮ್ಮ

ಬಂದರೆ ಬರಲಿ ಗುಡುಗಮ್ಮ
ಹೆದರೆನು ನಾನು ನೋಡಮ್ಮ
ಕೈಯಲಿ ಪಟಾಕಿ ಹೊಡೆದರೆ ಸಾಕು
ಗುಡುಗುಡು ಗುಡುಗು ಓಡಲೇ ಬೇಕು

ಪಟಪಟ ಸದ್ದು ಸಿಡಿದರೆ ಮೋಜು
ನನಗೇನಿಲ್ಲ ಯಾರದೂ ಗೋಜು
ಬಂದರೆ ಬರಲಿ ಕರಾಳ ರಾತ್ರಿ
ಜೊತೆಗಿದೆ ಬೆಳಕು ನನಗದು ಖಾತ್ರಿ

ಮಿಂಚಿನ ಸಂಚಿಗೆ ಬ್ಯಾಟರಿ ಉಂಟು
ನನಗೂ ಅದಕೂ ಪ್ರೇಮದ ನಂಟು

ಬಂದರೆ ಬರಲಿ ಮಳೆರಾಯ
ಅವನಿದ್ದರೆ ಭೂಮಿ ಹಸಿಕಾಯ
ಮಳೆ ಹೊಯ್ದರೆ ಮಾಳಿಗೆಯೇ ಒಡಲು
ಬೆಚ್ಚಗೆ ಹೊದ್ದರೆ ನಿದ್ದೆಯೇ ಕಡಲು

ರಾತ್ರಿಯ ಹೊತ್ತಲಿ ಜಿನುಗಲಿ ಹನಿಯು
ಬೆಳಗೆದ್ದರೆ ಹೊಚ್ಚನೆ ಮೂಡಲಿ ರವಿಯು
ಬಂದರೆ ಬರಲಿ ಗುಡುಗಮ್ಮ
ಹೆದರೆನು ನಾನು ನೋಡಮ್ಮ

**–ನಾಗರೇಖಾ ಗಾಂವಕರ, ದಾಂಡೇಲಿ**